ಖಂಡಗಳ ಪರಿಶೀಲನೆ

ಉಪಾಧ್ಯಕ್ಷರು.— ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ

''ನೇ ಖಂಡವು ವಿಧೇಯಕದ ಅಂಗ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ನೇ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೆಯ ಖಂಡ ಇತ್ಯಾದಿ

ಪ್ರಸ್ತಾವನೆಯೆಂದರೆ.—

ಉಪಾಧ್ಯಕ್ಷರು.— ''ಮೊದಲನೆಯ ಖಂಡ. ಹೆಸರು. ಮತ್ತು ಅವತರಣಿಕೆಗಳು, ವಿಧೇಯಕದ ಅಂಗಗಳು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಅನುಮೋದನಾ ಪ್ರಸ್ತಾವ

ಶ್ರೀ ಬಿ. ಎ. ಜೀವಿಜಯ.— ಈ ಕೆಳಕಂಡ ಪ್ರಸ್ತಾವವನ್ನು ಸಭೆಯು ಅನುಮೋದಿಸುವುದು.

''ಕರ್ನಾಟಕ ರಾಜ್ಯದ ಅರಣ್ಯ (ತಿದ್ದುಪಡಿ) ವಿಧೇಯಕ ೧೯೮೩''

ಉಪಾಧ್ಯಕ್ಷರು.— ಪ್ರಸ್ತಾವವೇನೆಂದರೆ

''ಕರ್ನಾಟಕ ರಾಜ್ಯದ ಅರಣ್ಯ (ತಿದ್ದುಪಡಿ) ವಿಧೇಯಕ ೧೯೮೩ ನ್ನು ಸಭೆಯು ಅನುಮೋದಿಸುವುದು''

(ಪ್ರಸ್ತಾವವು ಅಂಗೀಕರಿಸಲ್ಪಟ್ಟು ವಿಧೇಯಕ ಅನುಮೋದಿಸಲ್ಪಟ್ಟಿತು)

Statement by Minister

Reg: Fire accident in Konkal Village Yadgir Taluk

SRI V. L. PATIL (Minister for Revenue).—

It has been reported by the Deputy Commissioner, Gulbarga on 24-3-1983 that fire accident took place at Konkal Village in Yadgir Taluk on midnight of 23-3-1983. One person by name Shri Bugappa S/o Thippanna, aged 45 years has expired on the spot due to fire injuries. 4 other persons are injured. Totally 69 houses are report to have been burnt with loss of 10 goats. The loss is alleged to be about 4 lakhs. The Deputy Commissioner has visited the spot on 24-3-1983 along with the special Deputy Commissioner(Development) and Assistant Commissioner Yadgir and has taken measures to control the f re and one fire fighting force was requisitioned from

Raichur. Immediate relief of Rs. 300 has been distributed to each of the persons affected by the Tahsildar. Arrangements have also been made to run a community kitchen for about a week. Arrangement have also been made so that commercial banks will sanction loans to the affected persons. All eligible affected families have been sanctioned low-cost houses. The Deputy Commissioner went to the hospital at Yadgir and has met the injured persons in the hospital and has ensured that proper medical care is made available. It has also been reported by the Deputy Commissioner that necessary relief measures have been taken. A further report from the Deputy Commissioner, Gulbarga has been requested.

ಶ್ರೀ ಎ. ಮಲ್ಲಿಕಾರ್ಜುನ ಖೂರ್ಗೆ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆ ಪ್ರಕಾರ ಒಬ್ಬರೇ ಒಬ್ಬರು ತೀರಿಕೊಂಡಿದ್ದಾರೆಂದು ಹೇಳಿದ್ದಾರೆ. ನನಗೆ ಬಂದ ವರದಿ ಪ್ರಕಾರ ಇಬ್ಬರು ಎಂದು ಗೊತ್ತಾಗಿದೆ. ೫ ಜನ ಇನ್‌ಜ್ಯೂರ್ಡ್ ಆಗಿದ್ದಾರೆಂದು ತಿಳಿದುಬಂದಿದೆ. ಸುಮಾರು ೧೦೦ ಮನೆಗಳು ಆದರಲ್ಲಿ ಸುಟ್ಟು ಹೋಗಿವೆ ಎಂದು ಗೊತ್ತಾಗಿದೆ. ಈಗ ತಾವು ೪ ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದೀರಿ. ಅಲ್ಲಿ ಬಡವರೇ ಇದ್ದರೂ ಸಹ ಒಂದೊಂದು ಸಂಸಾರಕ್ಕೆ ೫-೬ ಸಾವಿರ ರೂಪಾಯಿ ಪ್ರಕಾರ ಲೆಕ್ಕ ತೆಗೆದುಕೊಂಡರೆ ಸುಮಾರು ಲಕ್ಷಾಂತರ ರೂಪಾಯಿ ಆಗುತ್ತದೆ. ಈಗ ಇಮಿಡಿಯಟ್ ರಿಲೀಫ್‌ಗೆ ತಹಶೀಲ್ದಾರ್ ಅವರು ಕೊಟ್ಟಿರುವುದು ಕೇವಲ ೩೦೦ ರೂಪಾಯಿ ಮಾತ್ರ ಈಗ ಸದ್ಯಕ್ಕೆ ಅವರು ಎಲ್ಲಿ ಇರಬೇಕು, ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಅವರುಗುಡಿಸಲುಗಳಲ್ಲೇ ಇದ್ದಾರಾ ? ಇಲ್ಲ ಟೆಂಪರರಿ ಕ್ಯಾಂಪ್ ಹಾಕಿಸಿದ್ದೀರಾ? ಇಲ್ಲ ಟೆಂಪರರಿ ಶೆಲ್ಟರ್ ಹಾಕಿದ್ದೀರಾ ಗೊತ್ತಾಗಲಿಲ್ಲ. ಈಗ ತಾವು ಅವರಿಗೆ ಲೋಕಾಸ್ಟ್ ಹೌಸ್‌ಗೆ ಹೇಳಿದ್ದೇವೆಂದು ಹೇಳಿದ್ದಿರಿ. ಆದರ ಬದಲು ಜನತಾ ಪಂಸೆಗಳನ್ನು ಸ್ಯಾಂಕ್ಷನ್ ಮಾಡಿ ಅವರಿಗೆ ನಾಲ್ಕೈದು ಸಾವಿರ ರೂಪಾಯಿ ಕೊಟ್ಟರೆ ಒಳ್ಳೆಯದು. ಇವೊತ್ತು ಅಲ್ಲಿ ಕುರಿಗಳನ್ನು ಕಳೆದುಕೊಂಡಿದ್ದಾರೆ ಕೆಲವು ಜನರು ಎತ್ತುಗಳನ್ನು ಕಳೆದುಕೊಂಡಿದ್ದಾರೆ, ಅವರ ಮನೆಯಲ್ಲಿದ್ದ ದವಸಧಾನ್ಯ ಹೋಗಿದೆ. ಆದ್ದರಿಂದ, ಪ್ರತಿಯೊಬ್ಬರಿಗೂ ಒಂದೊಂದು ಸಾವಿರ ರೂಪಾಯಿ ಹಣ ಕೊಟ್ಟು, ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕು. ಅಲ್ಲದೆ, ಅವರಿಗೆ ಕಮರ್ಷಿಯಲ್ ಬ್ಯಾಂಕಿನಿಂದ ಲೋನ್ ಸಿಕ್ಕಬೇಕಾದರೆ ಬ್ಯಾಂಕ್ ಫಾರ್ಮ್ಯಾಲಿಟೀಸ್ ಇರುವುದರಿಂದ ತಕ್ಷಣ ಅವರಿಗೆ ಹಣ ಸಿಕ್ಕುವುದಿಲ್ಲ, ಅಪ್ಲಿಕೇಷನ್ ಬಿಲ್ಡ್ ಅಪ್ ಮಾಡಿ ಗ್ಯಾರಂಟಿ ಅವರಿಗೆ ಹಣ ಕೊಡುತ್ತಾರೆಯೇ? ಆದ್ದರಿಂದ, ಸರ್ಕಾರ ನೇರವಾಗಿ ಡಿಆರ್‌ಡಿಎಸ್ ಫಂಡ್ ಅಥವಾ ಇನ್ನಾವುದಾದರೂ ಫಂಡ್‌ನಿಂದ ನೇರವಾಗಿ ೧-೨ ಸಾವಿರ ರೂಪಾಯಿ ಲೋನ್ ಕೊಟ್ಟು, ಮನೆಗಳನ್ನು ಕಟ್ಟಿಸಿಕೊಡಬೇಕು, ಎತ್ತುಗಳನ್ನು ಕಳೆದುಕೊಂಡಿರುವವರಿಗೆ ಐಆರ್‌ಡಿಪಿ ಪ್ರೋಗ್ರಾಮ್ ಅಥವಾ ಮತ್ತೆ ಯಾವುದಾದರೂ ಸ್ಕೀಮ್‌ನಿಂದ ಎತ್ತುಗಳನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೀರಾ? ಈಗ ತಾವು ಕೊಟ್ಟಿರುವ ೩೦೦ ರೂಪಾಯಿಗಳಿಂದ ಏನೂ ಆಗುವುದಿಲ್ಲ. ಈಗ ತಾವು ಕಮ್ಯುನಿಟಿ ಕಿಚನ್ ಸ್ಟಾರ್ಟ್ ಮಾಡಿದ್ದೇವೆಂದು ಹೇಳಿದ್ದೀರಿ. ನನಗೆ ಬಂದಿರುವ ವರದಿ ಪ್ರಕಾರ ಅವರಿಗೆ ೨-೩ ಕಿಲೋ ಜವಾರ್ ಸಪ್ಲೈ ಮಾಡಿದ್ದಾರೆ, ಅವರಿಗೆ ಬಟ್ಟೆಗಳನ್ನು ಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಟೆಲಿಕ್ಸ್ ಮೆಸೇಜ್ ಬಂದಿದ್ದನ್ನು ಹಮ್ಮೆ ಮುಂದೆ ಇಟ್ಟಿದ್ದೇನೆ. ಒಂದು ವಾರದ ವರೆಗೆ ಊಟದ ವ್ಯವಸ್ಥೆ ಮಾಡಿದ್ದೇವೆ. ಔಷಧೋಪಚಾರ ಮಾಡಿದ್ದೇವೆ ಬ್ಯಾಂಕ್ ಲೋನ್ ಸಿಕ್ಕುವ ವ್ಯವಸ್ಥೆ ಮಾಡುತ್ತಿದ್ದೇವೆ. ಇದರ ಜೊತೆಗೆ ೩೦೦ ರೂಪಾಯಿ ಕ್ಯಾಷ್ ಕೊಟ್ಟಿದೆ. ಇವೆಲ್ಲವನ್ನೂ ಮಾಡಿ ಮತ್ತೆ ಮುಂದಿನ ರಿಪೋರ್ಟ್ ಸಲುವಾಗಿ ಡೆಪ್ಯುಟಿ ಕಮಿಷನರ್ ಕಡೆಗೆ ಕಳುಹಿಸಿದ್ದೇವೆ. ಮುಂದಿನ ರಿಪೋರ್ಟ್ ಬರಬಹುದು. ಈಗ ಮಾನ್ಯ ಸದಸ್ಯರು ಏನು ಸೂಚನೆಗಳನ್ನು ಕೊಟ್ಟಿದ್ದೀರಾ ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಏನು ಮಾಡಲಿಕ್ಕೆ ಬರುತ್ತದೆ ಅದನ್ನೆಲ್ಲಾ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಇವೊತ್ತು ಜಿಲ್ಲಾಧಿಕಾರಿಗಳಿಂದ ವರದಿ ತರಿಸುವುದು ಮುಖ್ಯವಲ್ಲ. ಅಲ್ಲಿ ಇವಿಡಿಯನ್ಸ್ ಪರಿಹಾರ ಕೊಡುವ ಬಗ್ಗೆ ಡೈರೆಕ್ಷನ್ ಕೊಡಬೇಕು. ಅವರಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯಾಗಬೇಕು.

ಶ್ರೀ ವಿ. ಎಲ್. ಪಾಟೀಲ್.—ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ಮಾಡಿದೆ, ಮುಂದಿನ ರಿಪೋರ್ಟ್ ಬಂದನಂತರ ಮಾಡುತ್ತೇವೆ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ತಾವು ಲೋಕಾಸ್ಟ್ ಹೌಸ್ ಕೊಡುತ್ತೇವೆಂದು ಹೇಳಿದ್ದೀರಿ ಆ ಪ್ರಕಾರ ಆದರೆ ೧೫೦೦ ರೂಪಾಯಿ ಮಾತ್ರ ಕೊಡುತ್ತಾರೆ. ಜನತಾ ಹೌಸಿಂಗ್ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರೆ ಶಾಶ್ವತವಾಗಿ ಮನೆಗಳು ಆಗುತ್ತವೆ. ಆ ಬಗ್ಗೆ ಡೈರೆಕ್ಷನ್ ಕೊಡಲಿಕ್ಕೆ ತೊಂದರೆ ಏನೂ ಇಲ್ಲ. ಇವೊತ್ತು ಜಿಲ್ಲಾಧಿಕಾರಿಗಳು ೧೦೦೦ ರೂಪಾಯಿವರೆಗೆ ಹಣ ಕೊಡಲಿಕ್ಕೆ ಅವಕಾಶ ಇದೆ. ಹಣ ಇಲ್ಲದೇ ಇದ್ದರೆ ತಾವು ಇಲ್ಲಿಂದ ಒಂದು ಟೆಲಿಕ್ಸ್ ಮೆಸೇಜ್ ಕಳುಹಿಸಿ ಅವರು ಡಿಆರ್‌ಡಿಎಸ್ ಫಂಡ್‌ನಿಂದ ಅಡ್ಜಸ್ಟ್ ಮಾಡುತ್ತಾರೆ ಅದಕ್ಕೆ ಅಡ್ಡಿ ಇಲ್ಲ.

ಒಬ್ಬ ಮಾನ್ಯ ಸದಸ್ಯರು —ಸಾಮಾನ್ಯವಾಗಿ ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆ ಎರಡು ಮೂರು ಮನೆಗಳಿಗೆ ಬೆಂಕಿ ಬಿದ್ದಿರುವುದು ಕೇಳಿದ್ದೇವೆ. ಆ ಸಂದರ್ಭದಲ್ಲಿ ಜನತಾ ಮನೆಗಳನ್ನು ಕೊಡತಕ್ಕದ್ದು ವಾಡಿಕೆ ಇದೆ. ಮನೆ ಸುಟ್ಟಿರುವಾಗ ಸರ್ಕಾರ ನೇರವಾಗಿ ಗ್ರಾಂಟ್ ಕೊಟ್ಟದ್ದು ನನ್ನ ಅನುಭವಕ್ಕೆ ಬಂದಿಲ್ಲ. ಇವೊತ್ತು ನಮ್ಮ ಸ್ನೇಹಿತರ ಊರಿನಲ್ಲಿ ಮನೆ ಸುಟ್ಟುಹೋಗಿದ್ದರ ಬಗ್ಗೆ ಹಣ ಕೊಡುವುದಾದರೆ, ನಮ್ಮ ಊರಿನಲ್ಲಿಯೂ ಮನೆಗಳಿಗೆ ಬೆಂಕಿ ಬಿದ್ದಿತ್ತು. ಅವರಿಗೂ ಹಣ ಕೊಡಬೇಕಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಮಗೆ ಏನು ಬೇಕು ಅದನ್ನು ನಾವು ಮಾಡಿಸಿಕೊಳ್ಳುತ್ತೇವೆ. ನಿಮ್ಮ ಊರಿನಲ್ಲಿ ಬೆಂಕಿ ಬಿದ್ದಿದ್ದರೆ, ನಿಮಗೆ ಏನು ಬೇಕು ಅದನ್ನು ನೀವು ಮಾಡಿಸಿಕೊಳ್ಳಿ. ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಏನುಬೇಕೋ ಅದನ್ನು ಅವರು ಕೇಳಿಕೊಳ್ಳಲಿ. ನಾವು ಕೇಳಿದ್ದನ್ನು ಮಾನ್ಯ ಸಚಿವರು ಒದಗಿಸಿಕೊಡಲು ಸಾಧ್ಯವಾಗುವುದಾದರೆ ಆಗುತ್ತದೆಂದು ಹೇಳಲಿ, ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಲಿ.

ಶ್ರೀ ವಿ. ಎಲ್. ಪಾಟೀಲ್.—ಡೀಟೈಲ್ಡ್ ಇನ್‌ಫರ್ಮೇಷನ್ ಬಂದಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತಾವು ಜಿಲ್ಲಾಧಿಕಾರಿಯವರಿಗೆ ಅಧಿಕಾರವನ್ನು ಕೊಟ್ಟಿರುವುದು ಬಹಳ ದಿವಸದ ಹಿಂದೆ. ಈಗ ತಾವು ತಹಸೀಲ್ದಾರ್‌ರವರಿಗೆ ಏತಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡಬಾರದು ?

ಶ್ರೀ ವಿ. ಎಲ್, ಪಾಟೀಲ್.—ಬಹಳ ದಿವಸ ಏನೂ ಇಲ್ಲ. ಹೊಸದಾಗಿಯೇ ಕೊಟ್ಟಿದೆ. ಆದರೆ ಇತ್ತೀಚೆಗೆ ಎರಡು ತಿಂಗಳ ಹಿಂದೆ ತಾವೇ ಅಧಿಕಾರದಲ್ಲಿದ್ದಿರಲ್ಲಾ ಆಗ ಏನು ಮಾಡಿದ್ದೀರಿ ?

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಲೋ ಕಾಸ್ಟ್ ಹೌಸಿಂಗ್ ಏನಿದೆ ಅದನ್ನು ಮೊದಲು ತೆಗೆದುಹಾಕಿ, ಅವರಿಗೆ ಪಕ್ಕಾ ಮನೆಗಳನ್ನೇ ಕಟ್ಟಿಸಿಕೊಡುವ ವ್ಯವಸ್ಥೆ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಸಲಹೆ ಚೆನ್ನಾಗಿದೆ, ವಿಚಾರ ಮಾಡುತ್ತಾರೆ. ಆದರೆ ಈ ಯೋಜನೆ ತಾವು ಮಾಡಿದ್ದೇ ಹೊರತು ನಾವು ಮಾಡಿದ್ದಲ್ಲ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಬಡವರಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ಆದರೆ ಹಿಂದಿನ ಸರ್ಕಾರದವರು ಇದನ್ನು ಮಾಡಿಕೊಟ್ಟಿದ್ದಾರೆಯೆ ?

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ಈ ಬಡವರು ಇನ್ನೂ ಎಷ್ಟು ದಿವಸ ಗುಡಿಸಲಲ್ಲೇ ವಾಸ ಮಾಡಿಕೊಂಡಿರಬೇಕು ? ಅವರ ಕಷ್ಟವನ್ನು ಪರಿಹಾರ ಮಾಡುವುದು ಬೇಡವೆ ?

ಶ್ರೀ ಕೆ. ಬಿ. ಶಾಣಪ್ಪ.—ಸ್ವಾಮಿ, ನಮ್ಮ ವಾಡಿಯಲ್ಲಿ ೮೦ ಗುಡಿಸಲುಗಳು ಸುಟ್ಟು ಹೋಗಿವೆ. ಅವರಿಗೆ ಏನು ಸಹಾಯ ಮಾಡಿದಿರಿ ? ಅವರು ಬಹಳ ಬಡವರು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ೬೯ ಮನೆಗಳು ಸುಟ್ಟು ಹೋಗಿವೆ ಅವುಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರೆ ಸಾಕು. ತಾವು ಜಿಲ್ಲಾಧಿಕಾರಿಯವರಿಗೆ ಆದೇಶ ನೀಡಬೇಕು. ಕಳೆದಸಾರಿ ಶಿವಮೊಗ್ಗ, ಧಾರವಾಡ, ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಹ ಬಂದಾಗ ತೊಂದರೆಗೆ ಒಳಗಾದವರಿಗೆ ನಾವು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ನೀವು ಏನು ಮಾಡಿದ್ದೀರೆಂದು ನಮ್ಮನ್ನು ನೀವು ಕೇಳಬೇಡಿ. ನಿಮ್ಮ ಸ್ನೇಹಿತರಾದ ಆಚಾರ್‌ರವರನ್ನೇ ಕೇಳಿನೋಡಿ. ಅವರಿಗೆ ಎಲ್ಲ ವಿಚಾರವೂ ಗೊತ್ತಿದೆ.

ಉಪಾಧ್ಯಕ್ಷರು.—ಈಗ ಸಭೆಯು ಕಾರ್ಯಕಲಾಪಗಳನ್ನು ಮುಂಗಿಸಿ ಮತ್ತೆ ನಾಳೆ ಬೆಳಿಗ್ಗೆ ೧೧ ಗಂಟೆಗೆ ಸಭೆ ಸೇರಲಿದೆ.

(ಸಭೆಯು ಸಂಜೆ ೫ ಗಂಟೆ ೧೫ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೧೯ನೇ ಮಾರ್ಚ್ ೩೦ನೇ ತಾರೀಖು, ಬುಧವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು)